**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: **21.01.2026**

**ಪಾಟೀ ಸವಾಲು:-** ಶ್ರೀ ಕೆಜೆಡಿ ಪ್ರತಿವಾದಿಯ ಪರ ವಕೀಲರಿಂದ

ಚಿನ್ನಯ್ಯನಿಗೆ ನಾಲ್ಕು ಜನ ಗಂಡು ಮಕ್ಕಳು, ಒಂದು ಹೆಣ್ಣು ಮಗಳು ಇದ್ದಾರೆ. ಅವರುಗಳು ರಾಜ, ವೆಂಕಟೇಶ್, ಅಣ್ಣಪ್ಪ, ತಿಮ್ಮಪ್ಪ, ಹೇಮಲತಾ. ಸದರಿ ಹೇಮಲತಾ ಮರಣ ಹೊಂದಿದ್ದು ಅವರ ಗಂಡ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಗಂಡ ಮತ್ತು ಮಕ್ಕಳು ಬದುಕಿದ್ದು ಅ ಬಗ್ಗೆ ನಿಮಗೆ ಗೊತ್ತು ಎಂದರೆ ನನಗೆ ಗೊತ್ತಿಲ್ಲ. ತಿಮ್ಮಪ್ಪ ರವರು ಮರಣ ಹೊಂದಿರುತ್ತಾರೆ. ಅವರ ಹೆಂಡತಿ ಮತ್ತು ಮಕ್ಕಳ ಬಗ್ಗೆ ಗೊತ್ತಿಲ್ಲ. ತಿಮ್ಮಪ್ಪರವರಿಗೆ, ಪಾರ್ತಮ್ಮ ಹೆಂಡತಿ ಹಾಗೂ ಮಂಜೂನಾಥ ಮತ್ತು ಆಶಾ ಎಂಬ ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹೇಮಲತಾ ರವರ ಗಂಡ ರಮೇಶ್ ರವರು ಬದುಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಚಿನ್ನಯ್ಯನಿಗೆ ಇಬ್ಬರು ಹೆಂಡತಿಯರು ಅವರು ಲಕ್ಷಮ್ಮ ಹಾಗೂ ಲೋಲಾಕ್ಷಿ ಎಂದರೆ ನನಗೆ ಗೊತ್ತಿಲ್ಲ. 2ನೇ ಹೆಂಡತಿಗೆ ಮಂಜ ಮತ್ತು ಲೋಕ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಚಿನ್ನಯ್ಯನ ತಂದೆ ಹೆಸರು ರಂಗಯ್ಯ. ರಂಗಯ್ಯನ ತಂದೆ ಹೆಸರು ಚಿನ್ನಯ್ಯ. ರಂಗಯ್ಯನ ಹೆಂಡತಿಯೇ ಮುನಿಯಮ್ಮ ಎಂದರೆ ಸರಿ. ಸದರಿಯವರಿಗೆ ಇಬ್ಬರು ಮಕ್ಕಳು ನನ್ನ ಗಂಡ ಗೋವಿಂದಯ್ಯ, ಚಿನ್ನಯ್ಯ ರವರು ಆಗಿರುತ್ತಾರೆ. ಗೋವಿಂದಯ್ಯನಿಗೆ ಸ್ವಾಮಿ ಎಂಬ ಮಗ ಇದ್ದ ಎಂದರೆ ಸರಿ., ಅವರು ಈಗ ಮರಣ ಹೊಂದಿದ್ದು ಅವರ ಮರಣ ದಿನಾಂಕ ಗೊತ್ತಿಲ್ಲ. ಸದರಿಯವರು ದಿ: 24.04.2006 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಇರಬಹುದು. ಸ್ವಾಮಿ ರವರ ಹೆಂಡತಿ ಹೆಸರು ಕಮಲ್ಲಮ್ಮ ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ ಅವರ ಹೆಸರು ಗೊತ್ತಿಲ್ಲ. ಸದರಿಯವರು ಮಂಡ್ಯದಲ್ಲಿ ವಾಸವಾಗಿದ್ದಾರೆ.

ದಾವಾ ಐಟಂ ನಂ.1ರ ಸ.ನಂ, ವಿಸ್ತೀರ್ಣ, ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಗುಲಸಿಂದ ಗ್ರಾಮದ ಗಂಗಕ್ಕ ಒಕ್ಕಲಿಗ ಜಾತಿಗೆ ಸೇರಿದ ರಂಗೇಗೌಡನ ಮಗ ನಂಜೇಗೌಡ ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರು ದಿ: 12.10.1949 ರಂದು ಗುಲಸಿಂದ ಗ್ರಾಮದ ಡೊಂಬರ ಜಾತಿ ಚಿನ್ನಯ್ಯನ ಮಗ ರಂಗಯ್ಯ ಕ್ರಯಕ್ಕೆ ಕೊಂಡುಕೊಂಡಿದ್ದ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು ಅದು ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಕ್ರಯದಿಂದ ಖರೀದಿ ಮಾಡಿರುವ ಕಾರಣ ಅದು ಅವರ ಸ್ವಾಯಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಅದು ಸ್ವಾಯಾರ್ಜಿತ ಸ್ವತ್ತು ಅಲ್ಲ ಪಿತ್ರಾರ್ಜಿತ ಸ್ವತ್ತು ಎಂದು ಹೇಳಿದರು. ನಾನು ಗೋವಿಂದಯ್ಯ ರವರನ್ನು ಯಾವ ವರ್ಷದಲ್ಲಿ ಮದುವೆಯಾಗಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಸದರಿ ಜಮೀನನ್ನು ರಂಗಯ್ಯ ರವರು

ಕೊಂಡುಕೊಂಡಿದ್ದಾಗ ನಾನು ಹುಟ್ಟಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ರಂಗಯ್ಯ ಬದುಕಿದ್ದಾಗಲೇ ದಿಃ 14.03.1962 ರಲ್ಲಿ ಚನ್ನರಾಯಪಟ್ಟಣದ ಅಬ್ದುಲ್ ಅಜಿಜ್ ರವರ ಮಗ ಅಬ್ದುಲ್ ಸುಬಾನ್ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ರಂಗಯ್ಯನ ರವರ ಸೊಸೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಅಬ್ದುಲ್ ಸುಬಾನ್ ರವರು ಲಕ್ಷಮ್ಮರವರಿಗೆ ಸದರಿ ಸ್ವತ್ತಿನ ಸ.ನಂ 20/1 ರಲ್ಲಿ 37 ಗುಂಟೆಯನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದು ಲಕ್ಷ್ಮಮ್ಮ ರವರ ಸ್ವಾಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಲಕ್ಷ್ಮಮ್ಮ ರವರು 3ನೇ ಪ್ರತಿವಾದಿಗೆ ದಿಃ 26.10.2005 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸ.ನಂ 188ರ ಸ್ವತ್ತನ್ನು ದಿಃ 26.12.1962 ರಂದು ಚಿನ್ನಯ್ಯನ ರವರ ಮಗ ರಂಗಯ್ಯನು ತಿಮ್ಮೇಗೌಡರವರ ಹೆಂಡತಿ ಲಕ್ಷ್ಮಮ್ಮ ರವರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚಿನ್ನಯ್ಯ ರವರು ದಿಃ 28.07.1994 ರಂದು ವೀರಭದ್ರಶೆಟ್ಟಿರವರ ಮಗ ಪುಟ್ಟರಾಜುರವರಿಗೆ 20 ಗುಂಟೆಯನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪುಟ್ಟರಾಜು ದಿಃ 10.11.1995 ರಲ್ಲಿ 20 ಗುಂಟೆಯನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ 3ನೇ ಪ್ರತಿವಾದಿ ಪ್ರಮಾಣಿಕ ಕ್ರಯದಾರರು ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯೇ ಸದರಿ ಸ್ವತ್ತಿಗೆ ಕಂದಾಯ ಕಟ್ಟಿಕೊಂಡು ಬರುತ್ತಿರುವ ವಿಚಾರ ನಿಮಗೆ ಗೊತ್ತು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ 3ನೇ ಪ್ರತಿವಾದಿ ಸದರಿ ಸ್ವತ್ತಿಗೆ ಸಂಪೂರ್ಣ ಹಕ್ಕುದಾರರು ಹಾಗೂ ಮಾಲೀಕರು ಎಂದರೆ ಸರಿಯಲ್ಲ.

ನಾನು ಉದ್ದೇಶ ಪೂರಕವಾಗಿ ತಿಮ್ಮಪ್ಪನ ಮಕ್ಕಳು, ಹೇಮಲತಾರ ಮಕ್ಕಳನ್ನು, ಚಿನ್ನಯ್ಯನ ಹೆಂಡತಿ ಮತ್ತು ಮಕ್ಕಳನ್ನು ಪಕ್ಷಗಾರನ್ನಾಗಿ ಮಾಡಿರುರವುದಿಲ್ಲ ಎಂದರೆ ಸರಿಯಲ್ಲ. ಆದಾ ಕಾರಣ ದಾವಾ ಸ್ವತ್ತಿನಲ್ಲಿ ನನಗೆ ಹಕ್ಕು ಇಲ್ಲದಿದ್ದರು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ

PW-1